ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./01/2022-23 ದಿನಾಂಕ:15-02-2023

## 2022-23ನೇ ಸಾಲಿನ ಬಿ.ಇಡಿ ಕೋರ್ಸಿನ ಐದನೇ ಸುತ್ತಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು

2022-23ನೇ ಸಾಲಿನ ಬಿ.ಇಡಿ ಕೋರ್ಸಿಗೆ ದಾಖಲಾತಿ ಬಯಸಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಮೆರಿಟ್, ಮೀಸಲಾತಿ ಮತ್ತು ಆದ್ಯತೆಯ ಅನ್ವಯ ಬಿ.ಇಡಿ ಸಂಸ್ಥೆ/ಕಾಲೇಜು ಹಂಚಿಕೆ ಸಹಿತ ಆಯ್ಕೆ ಪಟ್ಟಿ, ಅರ್ಹತಾ ಪಟ್ಟಿ ಮತ್ತು ತಿರಸ್ಕೃತ ಪಟ್ಟಿ ಹಾಗೂ ಅಭ್ಯರ್ಥಿಗಳ ರ್‍ಯಾಂಕ್ ಪಟ್ಟಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ:06-01-2023 ರಂದು ಪ್ರಕಟಿಸಲಾಗಿತ್ತು.

ದಿನಾಂಕ: 10-02-2023 ರಿಂದ 14-02-2023 ರವರೆಗೆ ನಡೆಸಲಾದ ಬಿ.ಇಡಿ ದಾಖಲಾತಿಯ ನಾಲ್ಕನೇ ಸುತ್ತಿನಲ್ಲಿ ಸೀಟು ಹಂಚಿಕೆ ಮತ್ತು ದಾಖಲಾತಿ ಪ್ರಕ್ರಿಯೆ ಮುಗಿದ ನಂತರ ಉಳಿದಿರುವ ಸೀಟುಗಳನ್ನು ಪರಿಗಣಿಸಿ, ಐದನೇ ಸುತ್ತಿನ ದಾಖಲಾತಿ ಪ್ರಕ್ರಿಯೆಗಾಗಿ ಸಂಸ್ಥೆಯವಾರು ಪ್ರವರ್ಗವಾರು [Institution wise remaining seats (category wise)] Seat Matrix ಅನ್ನು ದಿನಾಂಕ:15-02-2023 ರಂದು ಇಲಾಖಾ ವೆಬ್‌ಸೈಟ್ https://schooleducation.kar.nic.inನಲ್ಲಿ ಪ್ರಕಟಿಸಲಾಗಿದೆ.

### ಐದನೇ ಸುತ್ತಿನ ದಾಖಲಾತಿಗೆ ಪರಿಗಣಿಸಲಾಗುವ ಅಭ್ಯರ್ಥಿಗಳು

1. ದಿನಾಂಕ:09-02-2023 ರಂದು ಪ್ರಕಟಿಸಲಾದ ಸೀಟು ಹಂಚಿಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ, ಅರ್ಹತಾ ಪಟ್ಟಿಯಲ್ಲಿ ಉಳಿದ ಅಭ್ಯರ್ಥಿಗಳಿಗೆ ಅಂದರೆ ದಿನಾಂಕ:06-01-2023 ರಂದು ಪ್ರಕಟಿಸಲಾದ ಅರ್ಹತಾ ಪಟ್ಟಿಯಲ್ಲಿದ್ದು, ಇದುವರೆವಿಗೂ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ಐದನೇ ಸುತ್ತಿನ ದಾಖಲಾತಿಗೆ ಮಾತ್ರ ಅವಕಾಶ ಕಲ್ಪಿಸಿದೆ. ಈ ಅಭ್ಯರ್ಥಿಗಳಿಗೆ ಇದು ಅಂತಿಮ ಅವಕಾಶವಾಗಿರುತ್ತದೆ.
2. ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ 4ನೇ ಸುತ್ತಿನಲ್ಲಿ ಬಿ.ಇಡಿ ದಾಖಲಾತಿಗಾಗಿ ನಡೆದ ಮೂಲದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಪರಿಶೀಲನಾಧಿಕಾರಿಗಳು ಪರಿಶೀಲಿಸಿದಂತೆ ಪದವಿ/ಅಥವಾ ಸ್ನಾತಕ ಪದವಿ ಅಂಕಗಳು ವ್ಯತ್ಯಾಸವಾಗಿ ದಾಖಲಾತಿಯಾಗದಿರುವ ಅಭ್ಯರ್ಥಿಗಳಿಗೆ ಐದನೇ ಸುತ್ತಿನಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಿದೆ.
3. **ಅಭ್ಯರ್ಥಿಯು ನೀಡಿರುವ ಆಧ್ಯತೆಯಂತೆ** (*Option Entry*/Institution choice) **ನಾಲ್ಕನೇ ಸುತ್ತಿನಲ್ಲಿ ಕಾಲೇಜು ಹಂಚಿಕೆಯಾಗದೇ ಹೆಸರಿನ ಮುಂದೆ ** ಗುರುತು ನಮೂದಾಗಿರುವ** ಅಭ್ಯರ್ಥಿಗಳೂ ಸಹ ಕಾಲೇಜುಗಳಿಗೆ ಮರು ಆದ್ಯತೆ ನೀಡಲು ಅವಕಾಶ ಕಲ್ಪಿಸಿದೆ.

4. ಅರ್ಹತಾ ಪಟ್ಟಿಯಲ್ಲಿದ್ದು, ಇದುವರೆವಿಗೂ ಆಯ್ಕೆಪಟ್ಟಿಯಲ್ಲಿ ಸೀಟು ಹಂಚಿಕೆಯಾಗದ (ಮೂರು ಮತ್ತು ನಾಲ್ಕನೇ ಸುತ್ತಿನ ಪಟ್ಟಿಯಲ್ಲಿ ಸೀಟುಹಂಚಿಕೆಯಾದ ಅಭ್ಯರ್ಥಿಗಳನ್ನು ಹೊರತುಪಡಿಸಿ) ಅಭ್ಯರ್ಥಿಗಳೂ ಸಹ ಕಾಲೇಜುಗಳಿಗೆ ಮರು ಆದ್ಯತೆ ನೀಡಲು ಅವಕಾಶ ಕಲ್ಪಿಸಿದೆ.

**ವಿಶೇಷ ಸೂಚನೆ:-** ದಿನಾಂಕ:15-02-2023 ಮತ್ತು 16-02-2023 **ಕಾಲೇಜುಗಳಿಗೆ ಮರು ಆದ್ಯತೆ ನೀಡಲು ಕೊನೆಯ ಅವಕಾಶವಾಗಿರುತ್ತದೆ. ಅಭ್ಯರ್ಥಿಗಳು ಈಗ ನೀಡಿರುವ ಮರು ಆದ್ಯತೆಯನ್ನೇ ಪರಿಗಣಿಸಿ ಮುಂದಿನ ಸುತ್ತುಗಳ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮಾಡಲಾಗುವುದು. ಹಾಗೂ ಮುಂದೆ ಕಾಲೇಜುಗಳಿಗೆ ಮರು ಆದ್ಯತೆ ನೀಡಲು ಅವಕಾಶವಿರುವುದಿಲ್ಲ ಆದ್ದರಿಂದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳಿಗೆ ಮರು ಆದ್ಯತೆ ನೀಡುವುದು. ಕಾಲೇಜುಗಳಿಗೆ ಮರು ಆದ್ಯತೆ ನೀಡದೇ ತಮಗೆ ಕಾಲೇಜು ಹಂಚಿಕೆಯಾಗದೇ ಇದ್ದರೆ ಇದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.**

**ಮೇಲ್ಕಂಡ ಅಭ್ಯರ್ಥಿಗಳು** ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ:15-02-2023 ಪ್ರಕಟಿಸಿದ Seat Matrix ಅನ್ನು ಪರಿಶೀಲಿಸಿಕೊಂಡು, ವಿವಿಧ ಕಾಲೇಜುಗಳಲ್ಲಿ ತಮಗೆ ಅನ್ವಯವಾಗುವಂತೆ ಲಭ್ಯವಿರುವ ಸೀಟುಗಳಿಗೆ ನಿಮ್ಮ User ID ಮತ್ತು Password ಮೂಲಕ ಮತ್ತೊಮ್ಮೆ ಲಾಗಿನ್ ಆಗಿ ಆನ್‌ಲೈನ್ ಅರ್ಜಿಯಲ್ಲಿ ದಿನಾಂಕ:15-02-2023 ಮತ್ತು 16-02-2023 ಈ ಎರಡು ದಿನಗಳಲ್ಲಿ ಕಾಲೇಜು/ಸಂಸ್ಥೆಯ ಮರು ಆದ್ಯತೆಯನ್ನು (*Option Entry*/Institution choice) ನಮೂದಿಸುವುದು. **ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ತಮ್ಮ ಮೆರಿಟ್ ಮತ್ತು ರೋಸ್ಟರ್ ಅನ್ವಯ ಪ್ರಕಟಿಸಲಾದ** Seat Matrix ನಂತೆ ಸೀಟು ಲಭ್ಯವಿರುವ **ಕಾಲೇಜುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮರು ಆಧ್ಯತೆಯನ್ನು ನೀಡುವುದು. (ಮರು ಆಧ್ಯತೆಯನ್ನು ಸೀಟು ಲಭ್ಯವಿರುವ ಎಲ್ಲಾ ಕಾಲೇಜುಗಳಿಗೆ ನೀಡಬಹುದು. ಕಾಲೇಜುಗಳಿಗೆ ಆಧ್ಯತೆ ನೀಡುವ ಸಂಬಂಧ ಯಾವುದೇ ಮಿತಿಯನ್ನು ನಿಗದಿಗೊಳಿಸಿರುವುದಿಲ್ಲ). ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳಿಗೆ ಮರು ಆಧ್ಯತೆಯನ್ನು ನಮೂದಿಸುವುದು. ಕಡಿಮೆ ಸಂಖ್ಯೆಯ ಕಾಲೇಜುಗಳಿಗೆ ಆಧ್ಯತೆ ನೀಡಿ ಕಾಲೇಜು ಹಂಚಿಕೆಯಾಗದಿದ್ದಲ್ಲಿ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ. ಆಧ್ಯತೆ ನೀಡಲು ಇದು ಕೊನೆಯ ಅವಕಾಶವಾಗಿರುತ್ತದೆ.**

## ಐದನೇ ಸುತ್ತಿನ ದಾಖಲಾತಿಗೆ ಸೀಟು ಹಂಚಿಕೆ ಬಯಸಿ, ಕಾಲೇಜುಗಳಿಗೆ ಮರುಆಧ್ಯತೆ ನೀಡುವ ಅಭ್ಯರ್ಥಿಗಳು ಗಮನಿಸಬೇಕಾದ ಅಂಶಗಳು

1. ಕೆಲವು ಅಭ್ಯರ್ಥಿಗಳು ಹೆಚ್ಚಿನ ಮೆರಿಟ್ ಹೊಂದಿರುತ್ತಾರೆ ಆದರೆ ಕಾಲೇಜಿಗೆ ಆಧ್ಯತೆ ನೀಡುವಾಗ ತಾನು ದಾಖಲಾತಿ ಬಯಸುವ ಕಾಲೇಜುಗಳನ್ನು ಕ್ರಮಾನುಗತವಾಗಿ ನೀಡದೇ ಅಂದಾಜಿನ ಆಧಾರದಲ್ಲಿ ನೀಡಿರುತ್ತಾರೆ.

**ಉದಾಹರಣೆ:-** ಹೆಚ್ಚಿನ ಮೆರಿಟ್ ಹೊಂದಿರುವ ಒಬ್ಬ ಅಭ್ಯರ್ಥಿಯು X ಕಾಲೇಜಿಗೆ ದಾಖಲಾತಿ ಬಯಸಿರುತ್ತಾನೆ. ಆದರೆ ಮೊದಲ ಆಧ್ಯತೆಯಾಗಿ Y ಕಾಲೇಜಿಗೆ ನೀಡಿ ಆನಂತರ X ಕಾಲೇಜಿಗೆ ಆಧ್ಯತೆ ನೀಡಿರುತ್ತಾನೆ. ಇದರಿಂದ ಅವನಿಗೆ ಮೆರಿಟ್ ಮತ್ತು ರೋಸ್ಟರ್ ಅನ್ವಯ X ಕಾಲೇಜಿನಲ್ಲಿ ಸೀಟು ಸಿಗುವ ಅವಕಾಶವಿದ್ದರೂ ಸಿಗುವುದಿಲ್ಲ. ಆದರೆ ಈತನ ಮೆರಿಟ್ ಮತ್ತು ರೋಸ್ಟರ್‌ಗೆ Y ಕಾಲೇಜಿನಲ್ಲಿ ಸೀಟು ದೊರೆಯುವುದಿಲ್ಲ. ಕಾರಣ ಈತನಿಗಿಂತ ಹೆಚ್ಚು ಮೆರಿಟ್ ಇರುವ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ Y ಕಾಲೇಜಿಗೆ Option Entry /Institution Choice ಆದ್ಯತೆ ನೀಡಿರುತ್ತಾರೆ.

2. ಕೆಲವು ಅಭ್ಯರ್ಥಿಗಳು ಕಡಿಮೆ ಸಂಖ್ಯೆಯ ಕಾಲೇಜಿಗಳಿಗೆ ಆಧ್ಯತೆ ನೀಡಿರುತ್ತಾರೆ. ಇದರಿಂದ ಅಭ್ಯರ್ಥಿಗೆ ಕಾಲೇಜು ಹಂಚಿಕೆಯಾಗಿರುವುದಿಲ್ಲ. ಇದರಿಂದ ಅಂತಹ ಅಭ್ಯರ್ಥಿಗೆ ಈ ಹಂತದಲ್ಲಿ ತಾನು ಬಯಸುವ ಕಾಲೇಜಿಗೆ ಮೆರಿಟ್ ಮತ್ತು ರೋಸ್ಟರ್ ಅನ್ವಯ ಸೀಟು ಸಿಗುವ ಅವಕಾಶವಿದ್ದರೂ ಮತ್ತೊಬ್ಬ ಅಭ್ಯರ್ಥಿಗೆ ಆ ಕಾಲೇಜಿನಲ್ಲಿ ಸೀಟು ಹಂಚಿಕೆಯಾಗಿರುತ್ತದೆ.

3. ಹೆಚ್ಚಿನ ಮಾಹಿತಿಗಾಗಿ ದಿನಾಂಕ:05-01-2023 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ **"2022-23ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು"** ಇದನ್ನು ಗಮನಿಸುವುದು.

**ಸಹಿ/-**
ವಿಶೇಷಾಧಿಕಾರಿ
ಕೇಂದ್ರೀಕೃತ ದಾಖಲಾತಿ ಘಟಕ